ಹಿನ್ನೆಲೆಯನ್ನು ನಾನಂ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಸಂದರ್ಭ, ಏತಕ್ಕೆ ಆಯಿತಾ ಅದೆಲ್ಲಾ ಈಗ ನಾವು ಒಂದಂ ಸೆಟಲ್‌ಮೆಂಟ್‌ಗೆ ಬಂದ ಮೇಲೆ ಹೇಳುವುದು ಬೇಡ. ಅದರಲ್ಲೂ ಕೂಡ ನಾನು ತಮ್ಮ ಜೊತೆಗೆ ೧೯೭೨ನೇ ಇಸವಿಯಿಂದಲೂ ಕೂಡ ಒಟ್ಟಿಗೆ ಕೆಲಸ ಮಾಡಿದ್ದೇವೆ. ನಿನ್ನೆ ಉದ್ವೇಗಕ್ಕೆ ಕಾರಣವೇನು ಎನ್ನುವುದು ಬೇಡ. ತಮಗೆ ಈ ಘಟನೆ ಬಗ್ಗೆ ನೋವಾಗಿರುವುದರಿಂದ ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಮುಂದೆ ಈ ಸದನದಲ್ಲಿ ಆ ರೀತಿಯಾಗಿ ಯಾರೂ ಕೂಡ ನಡೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಬಾರದೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಾವೇನು ಮಾಡಿದಿವಿ, ಬೇರೆಯವರಂ ಏನು ಮಾಡಿದರೂ ಅದೆಲ್ಲಾ ಈಗ ಬೇಡ. ಈ ವಿಷಯವನ್ನು ಇಲ್ಲಿಗೇ ಮುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಂತಹ ಘಟನೆ ಬಗ್ಗೆ ಮಾನ್ಯ ಸದಸ್ಯರು ವಿಷಾದವನ್ನು ವ್ಯಕ್ತಪಡಿಸಿರುವುದರಿಂದ ನಾನು ಕೊಟ್ಟಂತಹ ನೋಟೀಸ್‌ನ್ನು ಪ್ರೆಸ್ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾವು ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆ ಖಂಡಿತವಾಗಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ತೆಗೆದುಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

೧) ಗದಗ ಬೆಟಗೇರಿ ನಗರದ ಕಲುಷಿತ ನೀರಿನಿಂದಾಗಿ ರೋಗಗಳು ಹರಡುತ್ತಿರುವುದರ ಕುರಿತು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಗದಗ ಬೆಟಗೇರಿ ನಗರಕ್ಕೆ ನೀರು ಸರಬರಾಜು ಮಾಡುವ ಕುರಿತು ತುಂಗಭದ್ರಾ ನೀರು ಪೂರೈಕೆಯ ಯೋಜನೆಯ ಕೆಲಸ ನಡೆದಿದ್ದು ಕೊಳವೆ ಬಾವಿಯಿಂದ ನೀರು ಪೂರೈಸುತ್ತಿದ್ದು ಅದು ಕಲುಷಿತವಾಗಿದ್ದು ಜನರಿಗೆ ಅದರಿಂದ ರೋಗಗಳು ಹರಡುತ್ತಿರುವ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—ತುಂಗಭದ್ರಾ ನದಿ ಮೂಲದ ಗದಗ-ಬೆಟಗೇರಿ ನೀರು ಸರಬರಾಜು ಯೋಜನೆಯ ೯೪೦ ಲಕ್ಷ ರೂ. ಅಂದಾಜಿಗೆ ಸರ್ಕಾರ ಜುಲೈ ೧೯೮೪ರಲ್ಲಿ ಆಡಳಿತಾನುಮೋದನೆ ನೀಡಿದೆ. ಈ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸಪ್ಟೆಂಬರ್ ೧೯೮೪ರಲ್ಲಿ ತಾತ್ಕಾಲಿಕ ಮಂಜೂರಾತಿ ನೀಡಿದೆ. ಈ ಯೋಜನೆಯ ಕೆಲಸಗಳು ಪ್ರಗತಿಯಲ್ಲಿದ್ದು, ೧೯೮೮ರ ಆಗಸ್ಟ್‌ಕೊನೆಗೆ ೧೯೩.೩೦ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಗದಗ-ಬೆಟಗೇರಿ ಜೋಡಿ ನಗರದ ನೀರು ಸರಬರಾಜು ನಿರ್ವಹಣಾ ಕಾರ್ಯವನ್ನು ನಗರಸಭೆಯವರೇ ನೋಡಿಕೊಳ್ಳುತ್ತಿದ್ದಾರೆ. ನಗರದಲ್ಲಿ ಈಗ ವಿದ್ಯುತ್ ಶಕ್ತಿ ಚಾಲಿತ ಪಂಪು ಗಳನ್ನು ಅಳವಡಿಸಿದ ಕೊಳವೆ ಬಾವಿಗಳು ಸಹ ಇರುತ್ತವೆ. ಸದರಿ ನಗರದಲ್ಲಿ ದಿನಂಪ್ರತಿ ತಲಾ ಒಂದಕ್ಕೆ ಸುಮಾರು ೩೫ ಲೀಟರು ನೀರನ್ನು ಸರಬರಾಜು ಮಾಡಲಾಗುತ್ತಿದೆ.

ದಿನಾಂಕ ೨೬-೯-೧೯೮೮ ರಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಕಾರ್ಯಾಲಯದಲ್ಲಿ ಸಭೆಯನ್ನು ಕರೆದು ಮುಖ್ಯ ಅಭಿಯಂತರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮತ್ತು ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರೊಡನೆ ಗದಗ-ಬೆಟಗೇರಿ ನಗರದಲ್ಲಿ ಕೊಳವೆ ಬಾವಿಗಳಿಂದ ನೀರು ಪೂರೈಸುವ ಬಗ್ಗೆ ಮತ್ತು ಆ ನೀರು ಹೆಚ್ಚು ಕಲುಷಿತವಾಗಿದ್ದು, ಜನರಿಗೆ ಅದರಿಂದ ರೋಗ ರುಜಿನಗಳು ಹರಡುತ್ತಿರುವ ಬಗೆ ಚರ್ಚೆ ನಡೆಸಲಾಗಿದೆ. ಬೆಟಗೇರಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಕೊಳವೆ ಬಾವಿಗಳ ಸುತ್ತ ನಿಂತು ಕಲುಷಿತ ನೀರು ಕೊಳವೆ ಬಾವಿಗಳಿಗೆ ಸೇರುತ್ತಿದ್ದುದು ಕಂಡು ಬಂದಿರುತ್ತದೆ. ಆದ್ದರಿಂದ ಕೊಳವೆ ಬಾವಿಗಳಿಗೆ

ಸುತ್ತ ಕಟ್ಟೆಯನ್ನು ಕಟ್ಟಿಸಲಾಗುತ್ತಿದೆ ಹಾಗೂ ಅಂತಹ ಕೊಳವೆ ಬಾವಿಗಳ ಸುತ್ತಾ ಇದ್ದ ಗಿಡ ಗಂಟೆ ಗಳನ್ನು ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊಳವೆ ಬಾವಿಗಳಿಗೆ ಕ್ಲೋರಿನೇಟರುಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಕ್ಲೋರೊಸ್ಕೋಪ್ ಗಳನ್ನು ಖರೀದಿ ಮಾಡಲು ಪುರಸಭಾ ಆಯುಕ್ತರಿಗೆ ಆದೇಶ ನೀಡಲಾಗಿದೆ. ರೋಗರುಜಿನಗಳನ್ನು ಹತ್ತಿಕ್ಕಲು ಎಲ್ಲ ವಿಧವಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ ಎಚ್. ಪಾಟೀಲ್.—ತಾವು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದೀರಿ ಸಂತೋಷ ತುಂಗಭದ್ರಾ ಯೋಜನೆಗೆ ೯೪೦ ಲಕ್ಷ ರೂಪಾಯಿಗಳ ಅಂದಾಜು ಇದ್ದು ಅದರಲ್ಲಿ ಕಳೆದ ೭–೮ ವರ್ಷಗಳಿಂದಲೂ ಸಹ ೧೯೩ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಈಗಾಗಲೇ ಎಲ್ ಐ ಸಿ ಯಿಂದ ೩–೪ ಕೋಟಿ ರೂಪಾಯಿಗಳನ್ನು ತಂದಿದ್ದೀರಿ. ಈ ಯೋಜನೆ ಮುಗಿಯಬೇಕಾದರೆ ೯ ಕೋಟಿ ರೂಪಾಯಿ ಗಳು ಬೇಕಾಗುತ್ತದೆ, ಆದ್ದರಿಂದ ಇದನ್ನು ಅದಷ್ಟೂ ಬೇಗ ಮುಗಿಸಿಕೊಡುತ್ತೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಈ ಯೋಜನೆ ಕೆಲಸ ತೆಗೆದುಕೊಂಡಿದ್ದಾರೆ ಅವರಿಗೆ ಕೊಡಬೇಕಾದಂಥ ಹಣ ಪ್ರಮಾಣಿಕವಾಗಿ ಕೊಟ್ಟಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇನೆ ಒಂದು ವಿಂಟಿಂಗ್ ಮಾಡಿ ಆದಷ್ಟು ಬೇಗ ಪ್ರಾಮಾಣಿಕವಾದ ಪ್ರಯತ್ನ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿ ಕುಡಿಯುವ ನೀರಿನ ಯೋಜನೆಗಳನ್ನು ಮಾಡಿದೆಯೋ ಆ ರೀತಿ ಪಟ್ಟಣಗಳಲ್ಲಿ ಏನು ನೀರಿನ ಅಭಾವ ಇದೆಯೋ ಅದನ್ನು ನಿವಾರಣೆ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಮತ್ತು ಗದಗ ಬೆಟಗೇರಿ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡಿ, ಸೂಕ್ತ ರೀತಿಯಲ್ಲಿ ಸರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್ ಮುಖ್ಯ ಮಂತ್ರಿ ಚಂದ್ರು ಅವರದು. (ಮಾನ್ಯ ಸದಸ್ಯರು ಸದನದಲ್ಲಿ ಗೈರು ಹಾಜರಾಗಿದ್ದರು) ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್ ಮಾನ್ಯ ಯಡಿಯೂರಪ್ಪನವರದ್ದು.

ಬೆಂಗಳೂರಿನ ಕಾಚರನಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರೀಕೃತ ಕಸಾಯಿ ಖಾನೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಕಾಚರಕನಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರಿಕೃತ ಕಸಾಯಿ ಖಾನೆಯನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯ ಸರ್ಕಾರ ಸ್ಥಾಪನೆ ಮಾಡಲು ಹೊರಟಿರುವುದರ ಬಗ್ಗೆ ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಪ್ರಾಣಿ ಆಹಾರ ನಿಗಮ ನಿಯಮಿತದ ವತಿಯಿಂದ ಬೆಂಗಳೂರಿನ ಕಾಚರಕನ ಹಳ್ಳಿಯಲ್ಲಿ ಅತ್ಯಾಧುನಿಕ ಯಾಂತ್ರೀಕೃತ ಕಸಾಯಿಖಾನೆಯನ್ನು ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ, ಬೆಂಗಳೂರು ಮಹಾ ನಗರಪಾಲಿಕೆಯ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿಂದ ಸಾಲ ಪಡೆದು ರೂ ೫೯೦ ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಯೋಚಿಸಲಾಗಿದೆ.

ಈಗ ಹಾಲಿ ಬೆಂಗಳೂರು ನಗರದಲ್ಲಿ ೪ ದೊಡ್ಡ ಪ್ರಮಾಣದ ಕಸಾಯಿ ಖಾನೆಗಳು ಬೆಂಗಳೂರು ಪ್ರಾಣಿ ಆಹಾರ ನಿಗಮದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳು ಬೆಂಗಳೂರು ನಗರದ ಫ್ರೇಸರ್ ಟೌನಿನ ಟ್ಯಾನರಿ ರಸ್ತೆಯಲ್ಲಿ, ಸಿಟಿ ಮಾರ್ಕೆಟ್ ಸಮೀಪದ ನರಸಿಂಹರಾಜ ರಸ್ತೆಯಲ್ಲಿ, ಯಶವಂತಪುರ ಹಾಗೂ ಬೆನ್‌ಸನ್ ಟೌನ್‌ನಲ್ಲಿ ಇರುತ್ತದೆ. ಈ ಕಸಾಯಿ ಖಾನೆಗಳನ್ನು ಸುಮಾರು ೫೦ ವರ್ಷಗಳ ಹಿಂದೆ ಬೆಂಗಳೂರು ನಗರಸಭೆಯು ಸ್ಥಾಪಿಸಿರುತ್ತದೆ. ಆಗ ಬೆಂಗಳೂರು ನಗರದ ಜನಸಂಖ್ಯೆ ೨ ಲಕ್ಷಗಳಿಗೂ ಕಡಿಮೆ ಇತ್ತು. ಈ ಕಸಾಯಿ ಖಾನೆಗಳು ನಗರದ ಮಧ್ಯದಲ್ಲಿದ್ದು ಇಕ್ಕಟ್ಟಿನ ಜಾಗದಲ್ಲಿ ಅನಾರೋಗ್ಯಕರವಾದ ವಾತಾವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಮನಗಂಡು ಸರ್ಕಾರವು